'ಸರ್, ನನ್ನ ನಾದಿನಿ ನಿನ್ನೆ ರಾತ್ರಿಯಿಂದ ಕಾಣಿಸುತ್ತಿಲ್ಲ... ರಾತ್ರಿ ಎಲ್ಲ ಹುಡುಕಿದೆವು... ಎಲ್ಲಕಡೆ... ಸಿಗಲಿಲ್ಲ... ದಯವಿಟ್ಟು ಹುಡುಕಿಕೊಡಿ' ಎಂದು ಒಳಬರಲು ಅನುಮತಿ ಕೂಡ ಕೇಳದೇ ಬಂದು ದಡಕ್ಕನೆ ಕುಳಿತವನ ಕಡೆ ನೋಡಿದ ಇನ್ಸ್‌ಪೆಕ್ಟರ್ ಪೂಜಾರಿ.

ಸುಮಾರು ಮುವತ್ತೈದರಿಂದ ನಲವತ್ತು ವಯಸ್ಸಿರಬಹುದು. ತಲೆಯಲ್ಲಿ ಆಗಲೇ ಅಲ್ಲಲ್ಲಿ ಬಿಳಿ ಕೂದಲು ಕಾಣುತ್ತಿದೆ. ಎರಡು ದಿನಗಳಿಂದ ಶೇವ್ ಮಾಡದ ಗಡ್ಡ, ಅಲ್ಲಿಯೂ ಕೆಲವೆಡೆ ಬಿಳಿ ಕೂದಲು, ಇಡೀ ದೇಹ ಬೆವರಿನಿಂದ ತೊಯ್ದಿದೆ. ಭಯಗ್ರಸ್ಥ ಮುಖ! ಅವನೊಂದಿಗೆ ಸುಮಾರು ಇಪ್ಪತ್ತೈದರ ಯುವತಿ, ಮುಖದಲ್ಲಿ ಅವನಿಗಿಂತ ಗಾಬರಿ, ಮೊದಲ ಬಾರಿಗೆ ಪೊಲೀಸ್ ಸ್ಟೇಶನ್‌ಗೆ ಬಂದಿರುವುದೇನೋ, ಎಲ್ಲಿ ಏನಾಗಿಬಿಡುತ್ತದೋ ಎನ್ನುವ ಭಯ, ಆತಂಕ! ಅವರ ಕಷ್ಟ ಅರ್ಥ ಮಾಡಿಕೊಂಡ ಪೂಜಾರಿ,

'ಮೊದಲು ಕುಳಿತುಕೊಳ್ಳಿ... ಭಯ ಬೇಡ...' ಎಂದ. ಅವನ ಮಾತುಗಳು ಕೇಳಿಸಲೇ ಇಲ್ಲವೇನೋ ಎಂಬಂತೆ ಆಕೆ ನಿಂತೇ ಇದ್ದಳು. ಅವಳೊಡನೆ ಬಂದಿದ್ದವ ಮೆಲ್ಲನೆ ಅವಳ ಸೀರೆ ಎಳೆದು ಕುಳಿತುಕೋ ಎಂದು ಸೂಚಿಸಿದ ಮೇಲೆ ನಿಧಾನವಾಗಿ ಕುಳಿತುಕೊಂಡಳು.

'ಸರ್, ನನ್ನ ಹೆಸರು ಸದಾನಂದ ಅಂತ, ಇವಳು ನನ್ನ ಪತ್ನಿ ಸುಮತಿ. ನಾವು ಈ ಏರಿಯಾಗೆ ಹೊಸಬರು... ಬಂದು ಮೂರು ದಿನಗಳಾಯ್ತು. ನಿನ್ನೆ ರಾತ್ರಿ ಇವಳ ತಂಗಿ ಮಂಗಳಾ, ಐಸ್‌ಕ್ರೀಮ್ ತರುತ್ತೇನೆ ಎಂದು ಹೊರ ಹೋದವಳು ವಾಪಸ್ ಬರಲೇ ಇಲ್ಲ... ಇಡೀ ರಾತ್ರಿ ಹುಡುಕಿದೆವು, ಸಿಕ್ಕಲಿಲ್ಲ. ದಯವಿಟ್ಟು ಸಹಾಯ ಮಾಡಿ, ಪ್ಲೀಸ್...' ಎಂದ.

'ರಾತ್ರಿ ಎಷ್ಟು ಗಂಟೆಗೆ ಹೊರ ಹೋದಳು ನಿಮ್ಮ ನಾದಿನಿ?' ತನ್ನ ಪಕ್ಕದಲ್ಲಿದ್ದ ಕಾನ್ಸ್‌ಟೆಬಲ್‌ಗೆ ಬರೆದುಕೊಳ್ಳಲು ಸನ್ನೆ ಮಾಡಿ ಪೂಜಾರಿ ಕೇಳಿದ.

